

بِسۡمِ اللّٰہِ الرَّحۡمٰنِ الرَّحِیۡم

# ಲೌಕಿಕ ಸುಖ ಸಂಪತ್ತುಗಳು ಕೇವಲ ತಾತ್ಕಾಲಿಕ. ಅಲ್ಲಾಹನ ಸಂಪ್ರೀತಿ ಗಳಿಸುವ ಸತ್ಕರ್ಮಗಳಿಂದ ಅವು ನಮ್ಮನ್ನು ತಡೆಯುವಂತಾಗಬಾರದು.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 05-05-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಪಠಿಸಿದರು:*

اعْلَمُوا أَنَّمَا الْحَيَاةُ الدُّنْيَا لَعِبٌ وَلَهْوٌ وَزِينَةٌ وَتَفَاخُرٌ بَيْنَكُمْ وَتَكَاثُرٌ فِي الْأَمْوَالِ وَالْأَوْلَادِ ۖ كَمَثَلِ غَيْثٍ أَعْجَبَ الْكُفَّارَ نَبَاتُهُ ثُمَّ يَهِيجُ فَتَرَاهُ مُصْفَرًّا ثُمَّ يَكُونُ حُطَامًا ۖ وَفِي الْآخِرَةِ عَذَابٌ شَدِيدٌ وَمَغْفِرَةٌ مِّنَ اللَّهِ وَرِضْوَانٌ ۚ وَمَا الْحَيَاةُ الدُّنْيَا إِلَّا مَتَاعُ الْغُرُورِ

**ಇಅ್‌ಲಮೂ ಅನ್ನಮಲ್ ಹಯಾತುದ್ದುನ್‌ಯಾ ಲಯಿಬುನ್ ವಲಹ್‌ಉನ್ ವಝೀನತುನ್ ವತಫಾಖುರುನ್ ಬೈನಕುಮ್ ವತಕಾಸುರುನ್ ಫಿಲ್‌ಅಮ್‌ವಾಲಿ ವಲ್‌ಅವ್‌ಲಾದ್. ಕಮಸಲಿ ಗೈಸಿನ್ ಅಅ್‌ಜಬಲ್ ಕುಫ್ಫಾರ ನಬಾತುಹೂ ಸುಮ್ಮ ಯಹೀಜು ಫತರಾಹು ಮುಸ್‌ಫರ್ರನ್ ಸುಮ್ಮ ಯಕೂನು ಹುತಾಮನ್, ವಫಿಲ್ ಆಖಿರತಿ ಅಝಾಬುನ್ ಶದೀದುನ್ ವಮಗ್‌ಫಿರತುನ್ ಮಿನಲ್ಲಾಹಿ ವರಿಝ್ವಾನುನ್ ವಮಲ್‌ಹಯಾತುದ್ದುನ್‌ಯಾ ಇಲ್ಲಾ ಮತಾಉಲ್ ಗುರೂರ್.**

ತಿಳಿದುಕೊಳ್ಳಿರಿ, ಇಹಲೋಕ ಜೀವನ ಒಂದು ಆಟವೂ ವಿನೋದವೂ ಅಲಂಕಾರವೂ ನೀವು ಪರಸ್ಪರ ಡಂಭಾಚಾರ ಮಾಡುವುದೂ ಸಂಪತ್ತು ಮತ್ತು ಸಂತತಿಗಳಲ್ಲಿ ಹೆಮ್ಮೆ ಪಡುವುದೂ ಮಾತ್ರವಾಗಿದೆ. (ಇಹಲೋಕ ಜೀವನ) ಒಂದು ಮಳೆಯ ಹಾಗೆ. ಆ ಮೂಲಕ ಉತ್ಪನ್ನವಾದ ಬೆಳೆಯು ಕೃಷಿಕನನ್ನು ಸಂತೋಷಪಡಿಸುತ್ತದೆ. ಅನಂತರ ಅದು ಒಣಗಿ ಹೋದಾಗ, ಅದು ಹಳದಿ ಬಣ್ಣಕ್ಕೆ ತಿರುಗಿ ನೀನು ಕಾಣುವೆ. ಅನಂತರ ಅದು ಹುಲ್ಲು ಕಡ್ಡಿಗಳಾಗುತ್ತವೆ. ಪರಲೋಕದಲ್ಲಿ (ಅವಿಶ್ವಾಸಿಗಳಿಗೆ) ಕಠಿಣವಾದ ಶಿಕ್ಷೆ ಇದೆ. ಹಾಗೆಯೇ (ವಿಶ್ವಾಸಿಗಳಿಗೆ) ಅಲ್ಲಾಹನಿಂದ ಕ್ಷಮಾದಾನವೂ ಸಂತುಷ್ಟಿಯೂ ಇದೆ. ಐಹಿಕ ಜೀವನವು ಮೋಸಗೊಳಿಸುವ (ತಾತ್ಕಾಲಿಕ) ಸುಖಾನುಭವ ಮಾತ್ರವಾಗಿದೆ. (ಪವಿತ್ರ ಖುರ್‌ಆನ್ 57: 21).

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಅನೇಕ ಸ್ಥಳಗಳಲ್ಲಿ ಗಮನ ಹರಿಸಿದ್ದಾನೆ ಮಾತ್ರವಲ್ಲ ಎಚ್ಚರಿಕೆ ನೀಡಿದ್ದಾನೆ– ಈ ಲೋಕದ ಬಾಹ್ಯ ಜೀವನ, ಅದರ ಸುಖಸಂತೋಷಗಳು, ಅದರ ಸಂಪತ್ತು ಮತ್ತು ಸಾಧನ ಸಾಮಗ್ರಿಗಳು ತಾತ್ಕಾಲಿಕವಾದವುಗಳಾಗಿವೆ ಎಂದು. ಅವುಗಳು ಆಟ ವಿನೋದ ಮತ್ತು ಮನಸ್ಸಿಗೆ ತಾತ್ಕಾಲಿಕ ಸಂತೋಷ ನೀಡುವವುಗಳಾಗಿವೆ. ಅದಕ್ಕಿಂತ ಹೆಚ್ಚಿನ ಸ್ಥಾನ ಅವುಗಳಿಗಿಲ್ಲ. ಅಲ್ಲಾಹನ ಬಗ್ಗೆ ನಿರ್ಲಕ್ಷ್ಯದೋರುವವನು ಮತ್ತು ತನ್ನ ಜೀವಿತದ ಉದ್ದೇಶ ಲಕ್ಷ್ಯಗಳ ಬಗ್ಗೆ ಶ್ರದ್ಧೆ ನೀಡದವನು ಲೌಕಿಕವಾದ ಈ ವಸ್ತುಗಳ ಕಡೆಗೆ ಬಾಗುತ್ತಾನೆ. ಆದರೆ ಒಬ್ಬ ಸತ್ಯವಿಶ್ವಾಸಿಗೆ ಉನ್ನತ ಉದ್ದೇಶಲಕ್ಷ್ಯಗಳಿವೆ. ಅವನು ಇಂತಹ ವಿಷಯಗಳಿಂದ ಬಹಳ ಎತ್ತರದಲ್ಲಿದ್ದು ಯೋಚಿಸುತ್ತಾನೆ. ಅವನು ಅಲ್ಲಾಹನ ಸಾಮೀಪ್ಯ ಗಳಿಸುವ ಮತ್ತು ಅಲ್ಲಾಹನ ಸಂಪ್ರೀತಿ ಗಳಿಸುವ ಪ್ರಯತ್ನ ಮಾಡುತ್ತಾ ಇರುತ್ತಾನೆ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಪ್ರಕಾರ ಈ ಕಾಲದಲ್ಲಿ ಆಗಮಿಸಿದ ವಾಗ್ದತ್ತ ಮಸೀಹರ ಮತ್ತು ವಾಗ್ದತ್ತ ಮಹ್‌ದಿಯರ ಜಮಾಅತನ್ನು ಸೇರಿದವರಾಗಿ ಮತ್ತು ಅವರನ್ನು ಬೈಅತ್ ಮಾಡಿದುದಾಗಿ ವಾದಿಸುತ್ತಿರುವುದರಿಂದ ನಮ್ಮ ಯೋಚನೆ ನಿಶ್ಚಯವಾಗಿಯೂ ಬಹಳ ಉನ್ನತವಾಗಿರಬೇಕು. ಅಹ್ಮದಿಯರೆಂದು ಕರೆಯಲ್ಪಡುವ ನಾವು ನೈಜ ಅಹ್ಮದಿಗಳಾಗಬೇಕಾದರೆ ನಾವು ತಾತ್ಕಾಲಿಕ ಲೌಕಿಕ ಅಭಿಲಾಷೆಗಳನ್ನು ಮತ್ತು ಅಭಿರುಚಿಗಳನ್ನು ನಮ್ಮ ಉದ್ದೇಶಲಕ್ಷ್ಯವನ್ನಾಗಿ ಮಾಡಬಾರದು. ಇಂದಿನ ಕಾಲದಲ್ಲಿ ಲೋಕವು ಇಂತಹ ಅಭಿರುಚಿಗಳಲ್ಲಿ ಬಂಧಿಸಲ್ಪಟ್ಟಿವೆ. ಹೆಜ್ಜೆ ಹೆಜ್ಜೆಗೆ ಶೈತಾನ್ ಎಂತಹ ಕೇಂದ್ರಗಳನ್ನು ಸ್ಥಾಪಿಸಿದ್ದಾನೆಂದರೆ ಅವು ಪ್ರತಿಯೊಬ್ಬ ಮನುಷ್ಯನನ್ನು ತನ್ನ ಕಡೆಗೆ ಸೆಳೆಯಲು ಪ್ರಯತ್ನಿಸುತ್ತಿವೆ. ನಾವು ಅವುಗಳಿಂದ ರಕ್ಷಣೆ ಪಡೆಯಲು ಪೂರ್ಣ ರೂಪದಲ್ಲಿ ಪ್ರಯತ್ನ ಮಾಡಬೇಕಾಗಿದೆ. ಲೌಕಿಕ ಸಂಪತ್ತನ್ನು ಗಳಿಸುವುದು ಮತ್ತು ಲೌಕಿಕ ರಸಾನುಭೂತಿ ಗಳಿಸುವುದು ಎಂದೂ ನಮ್ಮ ಉದ್ದೇಶಲಕ್ಷ್ಯವಾಗಬಾರದು. ಏಕೆಂದರೆ ಇಂತಹ ವಸ್ತುಗಳ ಅಂತಿಮ ಪರಿಣಾಮ ಉತ್ತಮವಾಗಿರುವುದಿಲ್ಲ. ಅಲ್ಲಾಹನು ಲೌಕಿಕ ವಸ್ತುಗಳ ಉದಾಹರಣೆ ನೀಡಿ ಅವುಗಳು ಧಾನ್ಯದ ಬೆಳೆಯ ಹಾಗಿವೆ ಎಂದು ಹೇಳಿದ್ದಾನೆ. ಅವು ಕೊನೆಗೆ ಒಣಗಿ ಕಸಕಡ್ಡಿಗಳಾಗುತ್ತವೆ. ಬಿರುಗಾಳಿ ಅವುಗಳನ್ನು ಹಾರಿಸಿ ದೂರ ಕೊಂಡೊಯ್ಯುತ್ತದೆ. ಲೌಕಿಕ ಜನರ ಅಂತಿಮ ಗತಿ ಹೀಗೆಯೇ ಆಗುತ್ತದೆ. ಅವರ ಸಂಪತ್ತು ಅವರಿಗೆ ಪ್ರಯೋಜನ ನೀಡುವುದಿಲ್ಲ. ಅವರ ಸಂತಾನ ಸಹ ಅವರಿಗೆ ಪ್ರಯೋಜನಕರವಾಗುವುದಿಲ್ಲ. ಕೆಲವರು ಈ ಲೋಕದಲ್ಲಿಯೇ ತಮ್ಮ ಸಂಪತ್ತನ್ನೂ ತಮ್ಮ ಮಕ್ಕಳನ್ನೂ ಕಳೆದು ಕೊಳ್ಳುತ್ತಾರೆ. ಯಾರದಾದರೂ ಬಾಹ್ಯವಾಗಿ ಕಾಣುವ ಅಂತಿಮ ಗತಿ ಲೌಕಿಕವಾಗಿ ಉತ್ತಮವಾಗಿ ಕಂಡರೂ ಪರಲೋಕದಲ್ಲಿ ಅದರ ಲೆಕ್ಕಾಚಾರ ನಡೆಯುವುದಾಗಿರುತ್ತದೆ. ಆದುದರಿಂದ ನೀವು ನೆನಪಿಡಿರಿ ಲೌಕಿಕ ಜೀವನವು ಎಲ್ಲವೂ ಆಗಿರುತ್ತವೆ ಎಂದು ನೀವು ಭಾವಿಸಬೇಡಿರಿ ಎಂದು ಅಲ್ಲಾಹನು ಹೇಳುತ್ತಾನೆ. ನೈಜ ಜೀವಿತ ಮೃತಪಟ್ಟ ನಂತರದ ಜೀವಿತವಾಗಿದೆ. ಆದುದರಿಂದ ಅಲ್ಲಾಹನ ಸಂಪ್ರೀತಿಗಳಿಸಲು, ಅಂತಿಮಗತಿ ಒಳ್ಳೆಯದಾಗಿಸಲು, ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಿ ಅವನ ಆಜ್ಞೆಗಳ ಪ್ರಕಾರ ವರ್ತಿಸುವುದು ಆವಶ್ಯಕವಾಗಿದೆ. ಮನುಷ್ಯನು ಅಲ್ಲಾಹನ ಸಂಪ್ರೀತಿಗಳಿಸಲು ಪ್ರಯತ್ನ ಮಾಡುವುದಾದರೆ ಮತ್ತು ಅವನು ತೋರಿಸಿದ ಮಾರ್ಗದಲ್ಲಿ ಚಲಿಸುವುದಾದರೆ ಅಂತಿಮಗತಿ

ಉತ್ತಮವಾಗುವುದಲ್ಲದೆ ಇಹಲೋಕದ ಜೀವಿತ ಸಹ ಅವನಿಗೆ ಲಭಿಸುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳಿದ್ದಾರೆ, ಅಲ್ಲಾಹನ ಕಡೆಯಿಂದ ಆಗಮಿಸುವವರು ಲೋಕವನ್ನು ತ್ಯಜಿಸುತ್ತಾರೆ ಎಂದು. ಇದರ ಅರ್ಥ ಅಂತಹ ಜನರು ಲೋಕವನ್ನು ತಮ್ಮ ಉದ್ದೇಶಲಕ್ಷ್ಯವಾಗಿ ಮಾಡಿ ಕೊಳ್ಳುವುದಿಲ್ಲ ಎಂದಾಗಿದೆ. ಲೋಕವು ಅವರ ಸೇವಕನೂ ಗುಲಾಮನೂ ಆಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಯಾರು ಈ ಲೋಕವನ್ನು ತಮ್ಮ ಉದ್ದೇಶಲಕ್ಷ್ಯವನ್ನಾಗಿ ಮಾಡುತ್ತಾರೋ ಅವರು ಸ್ವಲ್ಪಮಟ್ಟಿಗೆ ಲೌಕಿಕ ಲಾಭ ಪಡೆದರೂ ಕೊನೆಗೆ ಅವರು ಹೀನೈಸಲ್ಪಡುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವ ಮಾತುಗಳು ಆ ಕಾಲಕ್ಕೆ ಸಂಬಂಧಿಸಿದುದು ಅಥವಾ ಪುರಾತನವಾದ ಮಾತೇನೂ ಅಲ್ಲ. ಇಂದಿನ ಕಾಲದಲ್ಲೂ ಹೀಗೆಯೇ ಸಂಭವಿಸುತ್ತದೆ. 2008ರ ಆರ್ಥಿಕ ಮುಗ್ಗಟ್ಟು ಪರಿಣಾಮಗಳು ಇಂದು ಸಹ ಮುಂದುವರಿದಿವೆ. ದೊಡ್ಡ ದೊಡ್ಡ ವಾಣಿಜ್ಯಗಳು ದಿವಾಳಿ ಆಗಿವೆ. ಸರಕಾರಗಳು ಸಹ ಅವುಗಳಿಂದ ಪ್ರಭಾವಿತವಾಗಿವೆ. ತೈಲ ಉತ್ಪಾದಕ ದೇಶಗಳು ತಮ್ಮ ಸಂಪತ್ತು ಎಂದೂ ಕೊನೆಗೊಳ್ಳದು ಎಂದು ಭಾವಿಸುತ್ತಿದ್ದುವು. ಆದರೆ ಅದು ಕೊನೆಗೊಂಡಿತು. ಅವರಿಗೆ ಏನೇನೆಲ್ಲಾ ಸಂಭವಿಸಿತು. ಅಲ್ಲಿನ ಸರಕಾರಗಳು ತಮ್ಮ ಖರ್ಚು ವೆಚ್ಚಗಳನ್ನು ಕಡಿಮೆಮಾಡಬೇಕಾಯಿತು. ಕೆಲಸಗಾರರನ್ನು ಬಿಡಬೇಕಾಯಿತು. ಮುಸ್ಲಿಮ್ ದೇಶಗಳ ದುರದೃಷ್ಟವೇನಂದರೆ ಅಲ್ಲಾಹನು ಅವರಿಗೆ ನೀಡಿದ ಸಂಪತ್ತನ್ನು ಅಲ್ಲಿನ ದೊರೆಗಳು ಮತ್ತು ರಾಜಕೀಯ ನಾಯಕರು ಅಲ್ಲಾಹನ ಆಜ್ಞೆಗಳನ್ನು ಪಾಲಿಸಿ ಅಲ್ಲಾಹನ ಸಂಪ್ರೀತಿಗಳಿಸಲು ಬಳಸುವುದಕ್ಕೆ ಬದಲಾಗಿ ತಮ್ಮ ಬೋಗಲಾಲಸೆ ಈಡೇರಿಸಲು ವಿನಿಯೋಗಿಸಿದರು. ಈಗಲೂ ಹಾಗೆಯೇ ಮಾಡುತಿದ್ದಾರೆ. ಅವರು ತೈಲ ಸಂಪತ್ತನ್ನು ಮತ್ತು ಇತರ ಸಂಪತ್ತನ್ನು ಜನಸೇವೆಗೋಸ್ಕರ ವಿನಿಯೋಗಿಸಬೇಕಾಗಿತ್ತು. ಮುಸ್ಲಿಮ್ ದೇಶಗಳನ್ನೂ ಇತರ ದೇಶಗಳನ್ನೂ ತಮ್ಮ ಕಾಲುಗಳ ಮೇಲೆ ನಿಲ್ಲುವಂತೆ ಮಾಡಲು ಪ್ರಯತ್ನಿಸಬೇಕಿತ್ತು. ತಮ್ಮ ದೇಶದಲ್ಲಿರುವ ಹಸಿದವರ ಮತ್ತು ಬಟ್ಟೆಯಿಲ್ಲದವರ ಆವಶ್ಯಕತೆಗಳನ್ನು ಈಡೇರಿಸಬೇಕಾಗಿತ್ತು. ಆದರೆ ಅವರು ಅದರ ಬಗ್ಗೆ ಗಮನ ಹರಿಸದೆ ತಮ್ಮ ತಿಜೋರಿಗಳನ್ನು ಭರ್ತಿಮಾಡುವುದರಲ್ಲಿ ಮಗ್ನರಾದರು. ಈಗ ಸಹ ಅವರ ಸ್ಥಿತಿ ಹೀಗೆಯೇ ಇದೆ. ಇದರ ಪರಿಣಾಮವಾಗಿ ಅವರು ಲೋಕದ ಮುಂದೆ ಹೀನಾಯಗೊಳಿಸಲ್ಪಡುತ್ತಿದ್ದಾರೆ. ಅಲ್ಲಾಹನು ಪರಲೋಕದ ಯಾವ ಶಿಕ್ಷೆಯ ಬಗ್ಗೆ ಹೆದರಿಸಿರುವನೋ ಅದು ಅತ್ಯಂತ ಹೀನೈಸುವ ಶಿಕ್ಷೆಯಾಗಿದೆ ಎಂದು ಅವರು ಯೋಚಿಸುವುದೇ ಇಲ್ಲ. ಪರಲೋಕದ ಬಗ್ಗೆ ಅವರಿಗೆ ಯಾವ ಚಿಂತೆಯೂ ಇಲ್ಲ.

ಲೋಕದ ಸಂಪತ್ತು, ಅದು ವ್ಯಕ್ತಿಗಳ ಕೈಯಲ್ಲಿದ್ದರೂ ದೊಡ್ಡ ದೊಡ್ಡ ವಾಣಿಜ್ಯ ಕಂಪನಿಗಳಲ್ಲಿದ್ದರೂ ಅಥವಾ ಸರಕಾರಗಳ ಕೈಯಲ್ಲಿದ್ದರೂ ಅದನ್ನು ತಪ್ಪಾಗಿ ವಿನಿಯೋಗಿಸಿದರೆ ಅದು ಅಲ್ಲಾಹನಿಂದ ಹಿಡಿಗೂಡಲ್ಪಡುತ್ತದೆ. ಅಲ್ಲಾಹನು ಇಚ್ಛಿಸುವುದಾದರೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಅದಕ್ಕೆ ಶಿಕ್ಷೆ ನೀಡುತ್ತಾನೆ. ಅಥವಾ ಅವನು ಪರಲೋಕದಲ್ಲಿ ಮಾತ್ರ ಶಿಕ್ಷಿಸುತ್ತಾನೆ. ಇದು ಬಹಳ ಭಯಪಡಬೇಕಾದ ವಿಷಯವಾಗಿದೆ. ಪ್ರತಿಯೊಬ್ಬ ಬುದ್ಧಿಶಾಲಿ ಮನುಷ್ಯನು, ನೈಜ ಮುಸ್ಲಿಮ್ ಆಗಿರುವವನು, ವಿಶಿಷ್ಟವಾಗಿ ಅಲ್ಲಾಹನನ್ನು ನಂಬುವವನು, ಯಾವಾಗಲೂ ತನ್ನ ದೃಷ್ಟಿಯಲ್ಲಿರಿಸಬೇಕಾದುದೇನೆಂದರೆ ಕೇವಲ ಬಾಹ್ಯವಾಗಿ ಮಾತ್ರವಲ್ಲ ಆರಾಧನೆಯಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವ ಬಗ್ಗೆ ಒಂದು ವಿಶಿಷ್ಟ ನೋವು ಹೊಂದಿ ಪ್ರಯತ್ನ ಮಾಡಬೇಕು. ಕೆಲವರು ಹೇಳುತ್ತಾರೆ: ನಾವು ನಮಾಝ್ ನಿರ್ವಹಿಸುತ್ತೇವೆ, ಇತರ ಆರಾಧನೆಗಳನ್ನು ಮಾಡುತ್ತೇವೆ, ಉಪವಾಸ ಅನುಷ್ಠಿಸುತ್ತೇವೆ. ಹಾಗಿರುವಲ್ಲಿ ಅಲ್ಲಾಹನು ಸೃಷ್ಟಿಸಿರುವ ಅನುಗ್ರಹಗಳನ್ನು ಗಳಿಸಲು ನಾವು ಪ್ರಯತ್ನಿಸಿದರೆ ಅದರಲ್ಲಿ ತಪ್ಪೇನಿದೆ ಎಂದು. ಇಂತಹ ಜನರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಬಾಹ್ಯವಾಗಿ ನಮಾಝ್, ಉಪವಾಸ, ಅನುಷ್ಠಿಸುವಾಗ ಅದರೊಂದಿಗೆ ನಿಷ್ಠೆ ಮತ್ತು ಸತ್ಯ ಸೇರಿರದಿದ್ದರೆ ಅದರಿಂದ ಯಾವ ಒಳಿತೂ ಇಲ್ಲ. ಇಂತಹ ಜನರ ನಮಾಝ್ ಬಗ್ಗೆಯೇ ಅಲ್ಲಾಹನು ಹೇಳಿರುವುದು **ಫವೈಲುನ್ ಲಿಲ್ ಮುಸಲ್ಲೀನ್** ಅಂತಹ ನಮಾಝ್ ನಿರ್ವಹಿಸುವವರಿಗೆ ನಾಶವಿದೆ ಎಂದು. ವಾಸ್ತವಿಕವಾಗಿ ಅಲ್ಲಾಹನು ನಮ್ಮಿಂದ ಎಂತಹ ಆರಾಧನೆಗಳನ್ನು ಮತ್ತು ಕೆಲಸಗಳನ್ನು ಮಾಡಿಸಲು ಬಯಸುತ್ತಾನೆಂದರೆ ಅದು ನಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮ ಪಡಿಸುವುದಾಗಿರಬೇಕು. ಲೌಕಿಕ ಸಂಪತ್ತು ಮತ್ತು ಲೌಕಿಕ ಲಾಭವನ್ನು ಗಳಿಸುವುದು ನಿಷಿದ್ಧವಲ್ಲ. ಅಲ್ಲಾಹನು ಸೃಷ್ಟಿಸಿದ ಲೌಕಿಕ ಅನುಗ್ರಹಗಳು ನಿಶ್ಚಯವಾಗಿಯೂ ಸತ್ಯವಿಶ್ವಾಸಿಗಳಿಗೆ ಗಳಿಸಲು ಅನುಮತಿಸಲ್ಪಟ್ಟವುಗಳೇ ಆಗಿವೆ. ಆದರೆ ಅವುಗಳನ್ನು ಧರ್ಮಬದ್ಧವಾದ ರೀತಿಯಲ್ಲಿ ಗಳಿಸಬೇಕೆಂಬ ಶರತ್ತು ಇದೆ. ಅವು ಧರ್ಮದ ಮಾರ್ಗದಲ್ಲಿ ಮತ್ತು ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವ ಮಾರ್ಗದಲ್ಲಿ ತಡೆಯೊಡ್ಡುವವುಗಳಾಗಬಾರದು ಅವುಗಳು ಆರಾಧನೆಗಳನ್ನು ತಡೆಗಟ್ಟುವವುಗಳಾಗಬಾರದು.

ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನನಗೆ ನನ್ನ ಸಮುದಾಯದ ಬಗ್ಗೆ ಹೆಚ್ಚಿಗೆ ಚಿಂತೆ ಇರುವ ವಿಷಯವೇನೆಂದರೆ, ನನ್ನ ಸಮುದಾಯದ ಜನರು ತಮ್ಮ ಆಶಾಭಿಲಾಷೆಗಳನ್ನು ಹಿಂಬಾಲಿಸುವರು; ಅವರು ಲೌಕಿಕ ಲಾಭ ಗಳಿಸಲು ಬೃಹತ್ ಯೋಜನೆಗಳನ್ನು ರೂಪಿಸುವರು; ಅವರು ತಮ್ಮ ಆಶಾಭಿಲಾಷೆಗಳನ್ನು ಹಿಂಬಾಲಿಸುವ ಕಾರಣ ಅವರು ಸತ್ಯದಿಂದ ದೂರ ಸರಿದು ಹೋಗುವರು. ಲೌಕಿಕ ಲಾಭ ಗಳಿಸಲು ಮಾಡುವ ಯೋಜನೆಗಳು ಅವರನ್ನು ಪರಲೋಕದ ಬಗ್ಗೆ ನಿರ್ಲಕ್ಷ್ಯರನ್ನಾಗಿ ಮಾಡುವುದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಜನರೇ ಲೋಕವು ಪ್ರಯಾಣದ ಗಂಟುಮೂಟೆ ಕಟ್ಟಿದೆ. ಪರಲೋಕವು ಆಗಮಿಸುವ ಸಿದ್ಧತೆ ನಡೆಸಿದೆ. ಎರಡು ಕಡೆಗಳಿಂದಲೂ ಪ್ರಯಾಣ ಪ್ರಾರಂಭವಾಗಿದೆ. ನಿಮಗೆ ಸಾಧ್ಯವಿದ್ದರೆ ನೀವು ಲೋಕದ ದಾಸರಾಗಬೇಡಿರಿ.

ನೀವು ಈಗ ಕೆಲಸದ ಮನೆಯಲ್ಲಿದ್ದೀರಿ. ಈಗ ನಿಮ್ಮ ಕೃತ್ಯಗಳ ಲೆಕ್ಕಾಚಾರ ಮಾಡುವ ಸಮಯವಾಗಿಲ್ಲ. ಆದರೆ ನೀವು ನಾಳೆ ಪರಲೋಕದ ಮನೆಗೆ ಹೋದರೆ ಅಲ್ಲಿ ಯಾವುದೇ ಅನುಷ್ಠಾನ ಕರ್ಮಗಳಿರಲಾರವು. ನೀವು ಅನುಷ್ಠಾನ ಕರ್ಮಗಳನ್ನು ಇಹಲೋಕದಲ್ಲಿಯೇ ಮಾಡಿ ಇಹಲೋಕದಲ್ಲಿಯೇ ಅದರ ಪರಿಣಾಮ ಗಳಿಸಬೇಕಾಗಿದೆ. ಆದುದರಿಂದ ನಿಮ್ಮ ಕರ್ಮಗಳನ್ನು ಸರಿಪಡಿಸಿರಿ.

ಆದುದರಿಂದ ಈಗ ಇದು ಕೆಲಸಮಾಡುವ ಲೋಕವಾಗಿದೆ. ಈ ಲೋಕದಲ್ಲಿ ಮಾಡುವ ನಮ್ಮ ಕೆಲಸಗಳು ಶಿಕ್ಷೆ ಮತ್ತು ರಕ್ಷೆಗೆ ಮಾರ್ಗವಾಗುವುವು. ಅಲ್ಲಾಹನ ಮಾತುಗಳನ್ನು ನೆನಪಿನಲ್ಲಿರಿಸುವವರು ಎಷ್ಟು ಅದೃಷ್ಟಶಾಲಿಗಳಾಗಿದ್ದಾರೆ. ಅಲ್ಲಾಹನು ಹೇಳಿದ್ದಾನೆ, ಇಹಲೋಕ ಜೀವನ ಒಂದು ಆಟವೂ ವಿನೋದವೂ ಅಲಂಕಾರವೂ ನೀವು ಪರಸ್ಪರ ಡಂಭಾಚಾರ ಮಾಡುವುದೂ ಸಂಪತ್ತು ಮತ್ತು ಸಂತತಿಗಳಲ್ಲಿ ಹೆಮ್ಮೆ ಪಡುವುದೂ ಮಾತ್ರವಾಗಿದೆ. ಅದು ಒಣಗಿದ ಕಸಕಡ್ಡಿಗಿಂತ ಹೆಚ್ಚಿನ ಸ್ಥಾನ ಪಡೆದಿಲ್ಲ. ಅದು ತುಂಡು ತುಂಡಾಗಿ ಗಾಳಿ ಅದನ್ನು ಹಾರಿಸಿಕೊಂಡು ಹೋಗುತ್ತದೆ. ಪ್ರಮುಖವಾಗಿರುವ ವಿಷಯ ಅಲ್ಲಾಹನ ಸಂಪ್ರೀತಿ ಗಳಿಸುವುದಾಗಿದೆ. ಇದೇ ವಿಷಯ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ನೀವು ಸತ್ಕರ್ಮಗಳನ್ನು ಮಾಡಿರಿ ಮತ್ತು ಅಲ್ಲಾಹನ ಸಂಪ್ರೀತಿ ಗಳಿಸಿರಿ ಎಂದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬ (ಶಿಷ್ಯರು) ಪ್ರತಿಯೊಂದು ಸಮಯದಲ್ಲಿ ಅಲ್ಲಾಹನ ಪ್ರೀತಿ ಗಳಿಸುವ ಉತ್ತಮ ಕರ್ಮಗಳನ್ನು ಹುಡುಕುತ್ತಿದ್ದರು. ಒಮ್ಮೆ ಒಬ್ಬ ವ್ಯಕ್ತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಹಾಜರಾಗಿ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನನಗೆ ನಾನು ಮಾಡಬೇಕಾದ ಒಂದು ಉತ್ತಮ ಕೆಲಸ ಹೇಳಿಕೊಡಿರಿ. ಆ ಕೆಲಸದಿಂದ ಅಲ್ಲಾಹನು ನನ್ನನ್ನು ಪ್ರೀತಿಸಲು ತೊಡಗಬೇಕು ಮತ್ತು ಜನರು ನನ್ನನ್ನು ಇಷ್ಟಪಡುವವರಾಗಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರೊಂದಿಗೆ ಹೇಳಿದರು: ನೀವು ಲೋಕದ ಬಗ್ಗೆ ಆಸಕ್ತಿ ಇಲ್ಲದವರೂ ಅದರ ಬಗ್ಗೆ ನಿರ್ಲಕ್ಷಿಸುವವರೂ ಆಗಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸಲು ತೊಡಗುವನು. ಜನರ ಸಂಪತ್ತನ್ನು ಅಸೂಯೆಯಿಂದ ನೋಡಬೇಡಿರಿ. ಆಗ ಜನರು ನಿಮ್ಮನ್ನು ಪ್ರೀತಿಸುವರು.

ಲೋಕದ ಬಗ್ಗೆ ನಿರಾಸಕ್ತಿ ಎಂದರೆ ಸಮಾಜದಿಂದ ಪೂರ್ಣವಾಗಿ ದೂರ ಸರಿಯಬೇಕು ಎಂದು ಅರ್ಥ ಮಾಡಬಾರದು. ಇಸ್ಲಾಮ್ ನಮ್ಮೊಂದಿಗೆ ಹಾಗೆ ಮಾಡಲು ಹೇಳುವುದಿಲ್ಲ. ನಮ್ಮ ಮುಂದೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುಂದರ ಜೀವಿತ ಮಾದರಿ ಇದೆ. ಅವರು ವಿವಾಹವಾಗಿದ್ದರು. ಪತ್ನಿಯರ ಹಕ್ಕುಗಳನ್ನು ಈಡೇರಿಸಿದ್ದರು. ಅವರು ತಮ್ಮ ಮಕ್ಕಳಿಗೆ ಸಂಬಂಧಿಸಿದ ಹಕ್ಕುಗಳನ್ನೂ ಈಡೇರಿಸಿದ್ದರು. ಅವರಿಗೆ ಸಂಪತ್ತು ಸಹ ಲಭಿಸಿತ್ತು. ಅವರಿಗೆ ಇವುಗಳೆಲ್ಲಾ ದೊರೆತಿದ್ದರೂ ಅಲ್ಲಾಹನ ಮತ್ತು ಜನರ ಹಕ್ಕುಗಳನ್ನು ಈಡೇರಿಸಿ ಕೊಟ್ಟರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು– ನೀವು ನನ್ನ ನಡೆವಳಿಕೆಯನ್ನು ಅನುಸರಿಸಿ ವರ್ತಿಸುವುದು ಆವಶ್ಯಕವಾಗಿದೆ. ಸನ್ಯಾಸಿಯಾಗಬಾರದು. ಲೋಕದಲ್ಲಿ ಜೀವಿಸಬೇಕು ಮತ್ತು ಅದರೊಂದಿಗೆ ನಾನು ವರ್ತಿಸಿದಂತೆ ವರ್ತಿಸಬೇಕು.

ನಾವು ಮನವರಿಕೆ ಮಾಡಬೇಕಾದುದೇನೆಂದರೆ, ನಮ್ಮ ಲೌಕಿಕ ಕೆಲಸಗಳು ನಮ್ಮ ಆರಾಧನೆಗಳನ್ನು ತಡೆಗಟ್ಟುವವುಗಳಾಗಬಾರದು. ಅಲ್ಲಾಹನ ಆಜ್ಞೆಗಳನ್ನು ಅನುಸರಿಸಿ ಕೆಲಸ ಮಾಡುವುದರಿಂದ ಅದು ನಮ್ಮನ್ನು ತಡೆಯಬಾರದು. ಸಂಪತ್ತನ್ನು ಗಳಿಸಲು ಮಗ್ನರಾಗಿರುವಾಗ ಅಲ್ಲಾಹನ ಹಕ್ಕುಗಳನ್ನು ಈಡೇರಿಸುವ ಬಗ್ಗೆ ನಿರ್ಲಕ್ಷ್ಯತೆ ಅದು ಉಂಟುಮಾಡಬಾರದು. ಅನ್ಯರ ಸಂಪತ್ತು ಮತ್ತು ಭೂಸ್ವತ್ತು ಬಗ್ಗೆ ಅಸೂಯೆಯಿಂದ ನೋಡಬಾರದು. ಏಕೆಂದರೆ ಅಸೂಯೆ ದೃಷ್ಟಿಯಿಂದ ನೋಡುವಾಗ ಅದು ಅನ್ಯರಿಗೆ ಹಾನಿ ಉಂಟುಮಾಡುವ ಯೋಚನೆಯನ್ನು ಹುಟ್ಟಿಸುತ್ತದೆ. ಲೋಕದಲ್ಲಿರುವ ಇಂದು ಕಂಡು ಬರುತ್ತಿರುವ ಗಲಬೆ ಗೊಂದಲಗಳಿಗೆ ಕಾರಣ ಈ ಅಸೂಯಯೇ ಆಗಿದೆ.

ಲೋಕದ ಬಗ್ಗೆ ನಿರಾಸಕ್ತಿಯನ್ನು ವಿವರಿಸುತ್ತಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಲೋಕದ ಬಗ್ಗೆ ನಿರಾಸಕ್ತಿ ಮತ್ತು ತ್ಯಾಗದ ಅರ್ಥ ಮನುಷ್ಯನು ತನಗೆ ಧರ್ಮಬದ್ಧವಾದ ವಸ್ತುವನ್ನು ನಿಷಿದ್ಧಗೊಳಿಸಬೇಕು ಎಂದಲ್ಲ. ತನ್ನ ಸಂಪತ್ತನ್ನು ನಾಶ ಮಾಡಬೇಕು ಎಂದೂ ಅಲ್ಲ. ನೀವು ಲೋಕದ ಬಗ್ಗೆ ನಿರಾಸಕ್ತರಾಗಬೇಕೆಂದು ಹೇಳಿದುದರ ಅರ್ಥ, ನಿಮಗೆ ನಿಮ್ಮ ಸಂಪತ್ತಿಗಿಂತ ಅಲ್ಲಾಹನ ಪಾರಿತೋಷಿಕ ಮತ್ತು ಕ್ಷಮೆಯ ಬಗ್ಗೆ ಹೆಚ್ಚು ಭರವಸೆ ಇರಬೇಕು ಎಂದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮಿಂದ, ಸತ್ಯವಿಶ್ವಾಸಿಗಳಿಂದ, ತಮ್ಮ ಸಮುದಾಯದ ಜನರಿಂದ ಲೋಕದ ಬಗ್ಗೆ ನಿರಾಸಕ್ತಿಯ ಮತ್ತು ಭಕ್ತಿಯ ಮಟ್ಟವನ್ನು ಮೇಲೆ ವಿವರಿಸಿದ ರೀತಿಯಲ್ಲಿ ಇಚ್ಛಿಸುತ್ತಾರೆ. ಅಲ್ಲಾಹನ ಅನುಗ್ರಹದಿಂದ ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ಕಾರಣ ಅನೇಕ ಅಹ್ಮದಿಯರಿಗೆ ಅಲ್ಲಾಹನು ಎಂತಹ ಜ್ಞಾನ ನೀಡಿರುವನೆಂದರೆ ಲೌಕಿಕವಾದ ನಷ್ಟಕ್ಕೆ ಅವರ ಮುಂದೆ ಯಾವುದೇ ಸ್ಥಾನ ಇರುವುದಿಲ್ಲ. ಅಂತಹ ಪರಿಸ್ಥಿತಿಗಳಲ್ಲಿ ಅಲ್ಲಾಹನ ಕಡೆಗೆ ಮೊದಲಿಗಿಂತ ಹೆಚ್ಚಾಗಿ ಅಭಿಮುಖೀಕರಿಸಬೇಕು ಎಂದು ಅವರು ಯೋಚಿಸುತ್ತಾರೆ. ನಾವು ನೋಡಿರುವೆವು, ಪಾಕಿಸ್ಥಾನದಲ್ಲೂ ಇತರ ಕೆಲವು ಸ್ಥಳಗಳಲ್ಲಿಯೂ ಲಕ್ಷಗಟ್ಟಲೆ ಮತ್ತು ಕೋಟಿಗಟ್ಟಲೆ ಬೆಲೆಬಾಳುವ ವಾಣಿಜ್ಯೋದ್ಯಮಗಳನ್ನು ಶತ್ರುಗಳು ನಾಶ ಮಾಡಿದರು. ಮತ್ತು ಸುಟ್ಟು ಹಾಕಿದರು. ಆದರೆ ಅಲ್ಲಾಹನ ಮೇಲೆ ಭರವಸೆ ಇಟ್ಟ ಆ ಅಹ್ಮದಿಯರು ಸರಕಾರದಿಂದಾಗಲಿ ಬೇರೆ ಯಾರಿಂದಾಗಲೀ ಏನನ್ನೂ ಬೇಡಲಿಲ್ಲ. ಅವರು ಅಲ್ಲಾಹನ ಮೇಲೆ ಭರವಸೆ ಇಟ್ಟು ವರ್ತಿಸಿದ ಕಾರಣ ನಷ್ಟವಾದ ಲಕ್ಷಗಟ್ಟಲೆ ಬೆಲೆಬಾಳುವ ಅವರ ವಾಣಿಜ್ಯೋದ್ಯಮಗಳಿಗೆ ಬದಲಾಗಿ ಕೋಟಿಗಟ್ಟಲೆ ಬೆಲೆಬಾಳುವುದನ್ನು ಗಳಿಸಿದರು.

ಈ ಉದಾಹರಣೆಗಳು ಅಹ್ಮದಿಯರ ವಿಶ್ವಾಸವನ್ನು ವರ್ಧಿಸುವವುಗಳಾಗಿವೆ. ಅದರೊಂದಿಗೆ ಅಭಿವೃದ್ಧಿ ಹೊಂದಿದ

ದೇಶಗಳಿಗೆ ಆಗಮಿಸಿದ ಅಹ್ಮದಿಯರಲ್ಲಿ ಈ ಉದಾಹರಣೆಗಳು ಎಂತಹ ಮನೋಭಾವ ಹುಟ್ಟಿಸುವವುಗಳಾಗಬೇಕೆಂದರೆ, ನಾವು ಲೌಕಿಕವಾದಿ ಜನರ ಹಾಗೆ ಸಂಪತ್ತಿನ ಮೇಲೆ ಬೀಳುವವರಾಗಬಾರದು. ಅನ್ಯರ ಸಂಪತ್ತನ್ನು ಅಸೂಯೆಯಿಂದ ನಾವು ನೋಡಬಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಪ್ರಕಾರ ನಾವು ಯಾರ ಬಗ್ಗೆ ಅಸೂಯೆಪಡಬೇಕೆಂದರೆ ಧಾರ್ಮಿಕ ವಿಷಯಗಳಲ್ಲಿ ನಮಗಿಂತ ಉತ್ತಮವಾಗಿರುವವರನ್ನು ಅಸೂಯೆಯ ದೃಷ್ಟಿಯಿಂದ ನೋಡಬೇಕು. ಅವರ ಹಾಗೆ ಆಗಲು ಪ್ರಯತ್ನಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೇಳಿದರು: ಅಲ್ಲಾಹನು ಲೌಕಿಕ ಚಟುವಟಿಕೆಗಳನ್ನು ಧರ್ಮಬದ್ಧಗೊಳಿಸಿದ್ದಾನೆ. ನೀವು ಲೌಕಿಕ ಚಟುವಟಿಕೆಗಳಲ್ಲಿ ಎಷ್ಟರ ಮಟ್ಟಿಗೆ ನಿಮ್ಮನ್ನು ತೊಡಗಿಸಿಕೊಳ್ಳಬೇಕೆಂದರೆ ಧರ್ಮದ ಮಾರ್ಗದಲ್ಲಿ ಅವು ನಿಮಗೆ ಸಹಾಯಕವಾದ ಸಾಮಗ್ರಿಗಳನ್ನು ಒದಗಿಸುವಂತಾಗಬೇಕು. ಅವುಗಳ ಮೂಲೋದ್ದೇಶ ಧರ್ಮವೇ ಆಗಿರಬೇಕು. ಎಂದರೆ ನೀವು ಲೌಕಿಕ ಲಾಭ ಸಂಪಾದಿಸಿರಿ. ಅದರಿಂದ ಲಾಭ ಪಡೆಯಿರಿ. ಆದರೆ ಪ್ರತಿಯೊಂದು ಸಮಯದಲ್ಲಿ ಅಲ್ಲಾಹನ ಬಗ್ಗೆ ಭಯ ಮತ್ತು ತಖ್ವ ನಿಮ್ಮ ಮುಂದೆ ಇರಬೇಕು. ಧರ್ಮದ ಉಪದೇಶಗಳು ನಿಮ್ಮ ಮುಂದೆ ಇರಬೇಕು. ಲೌಕಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ನಾವು ನಿಷಿದ್ಧಗೊಳಿಸುವುದಿಲ್ಲ. ಆದರೆ ಹಗಲು ರಾತ್ರಿ ಲೌಕಿಕ ವ್ಯವಹಾರಗಳಲ್ಲಿ ಮುಳುಗಿರಬೇಕೆಂದು ಸಹ ಹೇಳುವುದಿಲ್ಲ. ಅಲ್ಲಾಹನಿಗೆ ಸಲ್ಲಬೇಕಾದ ಕಾಲವನ್ನು ಲೌಕಿಕ ಕಾರ್ಯಗಳಿಗೆ ವಿನಿಯೋಗಿಸಬಾರದು. ನೀವು ಅಲ್ಲಾಹನನ್ನು ನೆನಪಿಸದೆ ಆರಾಧನೆಯ ಕಾಲದಲ್ಲಿ ಸಹ ಲೌಕಿಕ ಕೆಲಸದಲ್ಲಿ ಮುಳುಗಿರಬಾರದು. ಎಂದರೆ ನಮಾಝ್ ಮಾಡಬೇಕಾದ ಕಾಲದಲ್ಲಿ ಇಂಟರ್‌ನೆಟ್ ನೋಡುವುದು, ಫಿಲ್ಮ್ ನೋಡುವುದು ಅಥವಾ ಬೇರೆ ಲೌಕಿಕ ಕೆಲಸಗಳನ್ನು ಮಾಡಬಾರದು ಎಂದರ್ಥ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾರಾದರೂ ಲೌಕಿಕ ಕೆಲಸಗಳಲ್ಲಿಯೇ ಮುಳುಗಿರುತ್ತಾನಾದರೆ ಅವನು ಅನುಗ್ರಹ ರಹಿತನಾಗುತ್ತಾನೆ. ಅವನು ಕೇವಲ ಬಾಯಿ ಮಾತಿನಲ್ಲಿ ವಿಶ್ವಾಸವನ್ನು ಸೂಚಿಸುವವನಾಗಿರುತ್ತಾನೆ. ಅವನ ಬೈಅತ್ ಮತ್ತು ವಿಶ್ವಾಸ ವಾಸ್ತವಿಕವಾದುದಲ್ಲ. ನೀವು ಜೀವಂತರಾಗಿರುವವರ ಸಹವಾಸದಲ್ಲಿ ಜೀವಿಸಿರಿ. ಆಗ ನಿಮಗೆ ಜೀವಂತ ದೇವನ ಪ್ರಭೆ ಕಾಣಿಸುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೊಂದು ಸಂದರ್ಭದಲ್ಲಿ ಹೀಗೆ ಸಹ ಹೇಳಿದರು: ಲೋಕದ ಬಗ್ಗೆ ಯಾವುದೇ ಲಕ್ಷ್ಯ ಮತ್ತು ಸಂಬಂಧ ಹೊಂದಬಾರದೆಂದು ಯಾರೂ ಭಾವಿಸಬಾರದು. ಸತ್ಯವಿಶ್ವಾಸಿಯ ಸಂಬಂಧ ಲೋಕದೊಂದಿಗೆ ವಿಶಾಲವಾಗುವಾಗ ಅದು ಅವನ ಸ್ಥಾನವನ್ನು ಉನ್ನತಗೊಳಿಸುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಶಿಕ್ಷೆ ಮತ್ತು ನರಕದ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಹೇಳಿದರು: ನರಕ ಏನೆಂದು ತಿಳಿದುಕೊಳ್ಳಬೇಕು. ಒಂದು ನರಕ ಮರಣದ ನಂತರ ದೊರಕುವುದಾಗಿ ಅಲ್ಲಾಹನು ವಾಗ್ದಾನ ಮಾಡಿರುವ ನರಕವಾಗಿದೆ. ಮತ್ತೊಂದು ಇಹಲೋಕ ಜೀವಿತ ಸಹ ಅಲ್ಲಾಹನಿಗೋಸ್ಕರವಾಗಿಲ್ಲವಾದರೆ ಅದು ಸಹ ನರಕವೇ ಆಗಿದೆ. ಪ್ರವಾದಿಗಳ, ಅದರಲ್ಲೂ ವಿಶಿಷ್ಟವಾಗಿ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಮತ್ತು ಯಅ್‌ಖೂಬ್ ಅಲೈಹಿಸ್ಸಲಾಮರ ಉಪದೇಶ ಹೀಗಿತ್ತು: **ಫಲಾತಮೂತುನ್ನ ಇಲ್ಲಾ ವಅನ್‌ತುಮ್ ಮುಸ್ಲಿಮೂನ್.** ನೀವು (ಅಲ್ಲಾಹನಿಗೆ) ಸಂಪೂರ್ಣ ವಿಧೇಯತೆ ತೋರಿಸುವವರಾಗಿ ವಿನಾ ನಿಮಗೆ ಮರಣ ಬಾರದಿರಲಿ. (2:133).

ಜೀವಿಸುವುದು ಮತ್ತು ಮೃತನಾಗುವುದು ಮನುಷ್ಯನ ಅಧಿಕಾರಕ್ಕೊಳಪಟ್ಟಿರುವುದಿಲ್ಲ. ಆದುದರಿಂದ ಪ್ರತಿಕ್ಷಣದಲ್ಲಿ ಅಲ್ಲಾಹನ ಆಜ್ಞೆಗಳ ಬಗ್ಗೆ ದೃಷ್ಟಿ ಇರಬೇಕು. ಪರಲೋಕದ ಬಗ್ಗೆ ಚಿಂತಿಸಬೇಕು. ಲೌಕಿಕ ಅಭಿರುಚಿಗಳು ಕೊಳಕು ಅಸೂಯೆಯನ್ನು ಹುಟ್ಟಿಸಿ ಆಶಾಭಿಲಾಷೆಗಳನ್ನು ವರ್ಧಿಸುತ್ತದೆ. ಲೋಕದ ಬಗ್ಗೆ ಅಭಿರುಚಿ ಲೋಕದ ಬಗ್ಗೆ ಆಶಾಭಿಲಾಷೆಗಳನ್ನು ವರ್ಧಿಸುತ್ತದೆ. ದಾಹರೋಗ ಪೀಡಿತನ ಹಾಗೆ ಅವನ ದಾಹ ಶಮನವಾಗುವುದೇ ಇಲ್ಲ. ಅನಾವಶ್ಯಕ ಅಭಿಲಾಷೆಗಳ ಮತ್ತು ವ್ಯಥೆಯ ಅಗ್ನಿ ನರಕಾಗ್ನಿಗೆ ಸಮಾನವಾಗಿದೆ. ಅದು ಮನುಷ್ಯನ ಹೃದಯಕ್ಕೆ ಸುಖ ಸಂತೋಷ ನೀಡುವುದಿಲ್ಲ. ಹೃದಯವನ್ನು ಅವು ಬೇಗುದಿಗೊಳಪಡಿಸುತ್ತವೆ. ಆದುದರಿಂದ ನನ್ನ ಸ್ನೇಹಿತರ ದೃಷ್ಟಿಯಿಂದ ಈ ವಿಷಯ ಖಂಡಿತವಾಗಿ ಮರೆಯಾಗಿರಬಾರದು. ಮನುಷ್ಯನು ಸಂಪತ್ತಿನ ಬಗ್ಗೆ, ಹೆಣ್ಣು ಮತ್ತು ಮಕ್ಕಳ ಪ್ರೀತಿಯಲ್ಲಿ ಮತ್ತನಾಗಿ ಹುಚ್ಚನಾಗಬಾರದು. ಅವನ ಮತ್ತು ಅಲ್ಲಾಹನ ಮಧ್ಯೆ ಒಂದು ಪರದೆ ಹುಟ್ಟುವ ಹಾಗೆ ಅವನು ಅವುಗಳ ಪ್ರೀತಿಯಲ್ಲಿ ಪರವಶನಾಗಬಾರದು.

ಆದುದರಿಂದ ಈ ದೇಶಗಳ ಸುಖ ಸೌಲಭ್ಯಗಳು ನಮ್ಮನ್ನು ಅಲ್ಲಾಹನನ್ನು ಆರಾಧಿಸುವುದರ ಬಗ್ಗೆ ನಿರ್ಲಕ್ಷ್ಯತೆ ಹುಟ್ಟಿಸುವವುಗಳಾಗಬಾರದು. ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದರಿಂದ ವಂಚಿತರನ್ನಾಗಿ ಮಾಡುವಂತಾಗಬಾರದು.. ತಮ್ಮ ಉತ್ತಮ ಸಾಂಪತ್ತಿಕ ಸ್ಥಿತಿ, ಬಲಹೀನ ಸಾಂಪತ್ತಿಕ ಸ್ಥಿತಿಯನ್ನು ಹೊಂದಿರುವ ನಮ್ಮ ಸಹೋದರರ ಹಕ್ಕುಗಳನ್ನು ಈಡೇರಿಸಿಕೊಡುವುದರಿಂದ ನಮ್ಮನ್ನು ವಂಚಿತರನ್ನಾಗಿ ಮಾಡದಿರಲಿ. ಅದೇರೀತಿ ಇಸ್ಲಾಮಿನ ಪ್ರಚಾರ ಮತ್ತು ಇಸ್ಲಾಮಿನ ತಬ್ಲೀಗ್ ಬಗ್ಗೆ ನಾವು ನಮ್ಮ ಕೆಲಸಗಳನ್ನು ಮಾಡುವವರಾಗೋಣ. ನಾವು ಈ ಉದ್ದೇಶಲಕ್ಷ್ಯ ಮರೆತು ಬಿಡುವವರಾಗಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದುದರ ಉದ್ದೇಶವೇನೆಂದರೆ ನಾವು ಅಲ್ಲಾಹನ ಹಕ್ಕುಗಳನ್ನು ಈಡೇರಿಸಬೇಕು ಮತ್ತು ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಬೇಕು. ತಬ್ಲೀಗ್ ಮಾಡುವ ಕೆಲಸ ಸಹ ಮಾಡಬೇಕು. ಈ ರೀತಿ ನಾವು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ನಮ್ಮ ಉದ್ದೇಶ ಈಡೇರಿಸುವೆವು. ಅಲ್ಲಾಹನು ನಮ್ಮನ್ನು ಯಾವಾಗಲೂ ಅವನ ಸಂಪ್ರೀತಿ ಗಳಿಸುವ ಕೆಲಸಗಳಲ್ಲಿ ನಿರತರಾಗುವಂತೆ ಮಾಡಲಿ. ಈ ಲೋಕದ ಮೋಸ ಮಾಡುವ ಜೀವಿತ ಎಂದೂ ನಮ್ಮನ್ನು ಆವರಿಸದಿರಲಿ. ನಾವು ಈ ಲೋಕದ ನರಕದಿಂದಲೂ ಪರಲೋಕದ ನರಕದಿಂದಲೂ ನಮ್ಮನ್ನು

ರಕ್ಷಿಸಿಕೊಳ್ಳುವಂತಾಗಲಿ. ಅಲ್ಲಾಹನ ಅನುಗ್ರಹ ಮತ್ತು ಅವನ ಸಂಪ್ರೀತಿ ಇಹಲೋಕವನ್ನು ನಮಗೆ ಸ್ವರ್ಗವನ್ನಾಗಿ ಮಾಡುವುದಾಗಿರಲಿ. ಪರಲೋಕದಲ್ಲಿ ಸಹ ನಾವು ಸ್ವರ್ಗ ಗಳಿಸುವವರಾಗಲಿ – ಆಮೀನ್.

ಜುಮುಅ ನಮಾಝ್ ನಂತರ ಎರಡು ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು.

ಒಂದು, ಮುಕರ್ರಮ್ ಬಶಾರತ್ ಅಹ್ಮದ್ ಸಾಹಿಬ್, ಮುಹಮ್ಮದ್ ಅಬ್ದುಲ್ಲ ಸಾಹೇಬರ ಪುತ್ರ. ಮೇ ದಿನಾಂಕ 3ರಂದು ಪಾಕಿಸ್ಥಾನದ ಖಾನ್‌ಪುರದಲ್ಲಿ ಅವರನ್ನು ಶಹೀದರನ್ನಾಗಿ ಮಾಡಲಾಯಿತು– ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

ಎರಡನೆಯದು, ಪ್ರೊಫೆಸರ್ ತಾಹಿರ ಪರ್‌ವೀನ್ ಮಲಿಕ್ ಸಾಹಿಬ. ಪಂಜಾಬ್ ಯುನಿವರ್ಸಿಟಿಯಲ್ಲಿ ಪ್ರೊಫೆಸರ್ ಆಗಿದ್ದರು. ಎಪ್ರಿಲ್ 17ರಂದು ಶಹೀದ್ ಆದರು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

(ಇಬ್ಬರು ಶಹೀದರ ಸದ್ಗುಣಗಳನ್ನು ಹುಝೂರ್ ವಿವರಿಸಿದರು.)

———————*****———————

***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London on 05-05-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon